ಬೆಂಗಳೂರಿನಲ್ಲಿಯೇ ಕಳೆದರು. ಬೆಂಗಳೂರಿನ ಒಳ್ಳೊಳ್ಳೆಯ ಪುಸ್ತಕದ ಅಂಗಡಿಗಳ ಕಾಯಂ ಗ್ರಾಹಕರು ಅವರಾಗಿದ್ದರು. ಬ್ರಿಗೇಡ್ ರೋಡಿನ ಕೆ.ಕೆ. ಎಸ್. ಮೂರ್ತಿ ಅವರ 'ಸೆಲೆಕ್ಟ್ ಬುಕ್ ಶಾಪ್' ಅವರ ಪ್ರೀತಿಯ ತಂಗುದಾಣವಾಗಿತ್ತು. ಪುಸ್ತಕ ಕೊಳ್ಳುವುದು, ತಾವೂ ಓದುವುದು, ತಮ್ಮ ಸ್ನೇಹಿತರಿಗೂ ಓದಲು ಒದಗಿಸುವುದು ಅವರ ನೆಚ್ಚಿನ ಹವ್ಯಾಸಗಳಾಗಿದ್ದವು. ಬೆಂಗಳೂರಿನ ಗಂಗಾನಗರದ ಅವರ ನಿವಾಸದ ಮೇಲ್ಮಹಡಿಯನ್ನು ಪ್ರವೇಶ ಮಾಡಿದರೆ ಪುಸ್ತಕಗಳ ಬಗೆಗಿನ ಅವರ ಗೀಳಿನ ದರ್ಶನವಾಗುತ್ತದೆ. ಅವರನ್ನು ಭೆಟ್ಟಿಯಾಗಲು ನಾನು ಅವರ ಮನೆಗೆ ಹೋದರೆ, ಮಹಡಿಯ ಮೇಲೆ ಕರೆದುಕೊಂಡು ಹೋಗಿ ಎಂಟ್ಹತ್ತು ಹೊಸ ಪುಸ್ತಕಗಳನ್ನು ಕೊಟ್ಟು ಕಳುಹಿಸುತ್ತಿದ್ದರು. ಅವರು ಅದನ್ನು ಒಂದು ವ್ರತವೆನ್ನುವ ಹಾಗೆ ಪಾಲಿಸಿಕೊಂಡು ಬಂದಿದ್ದರು. ಅಲ್ಲದೆ, ನಾನು ಬರೆದ ಪುಸ್ತಕಗಳ ಪ್ರಕಟನೆಯ ವಿವಿಧ ಹಂತಗಳಲ್ಲಿ ಅವರು ಮಾರ್ಗದರ್ಶನ ಮಾಡುತ್ತಲೇ ಬಂದರು. ಒಂದು ಕಾಲದಲ್ಲಿ ಅವರು ನನಗೆ ಕ್ಲಾಸ್ ರೂಮಿನ ಗುರುಗಳಾಗಿದ್ದವರು; ಅನಂತರದ ದಿನಗಳಲ್ಲಿ ಸಾಹಿತ್ಯದ ಗುರುಗಳಾಗಿಯೂ ಬೆಂಬಲಿಸಿದರು.



ಓದಿನ ಜೊತೆಗೆ ಅವರು ಬೆಳೆಸಿಕೊಂಡು ಬಂದ ಇನ್ನೊಂದು **craze** ಅಂದರೆ ಸಿನಿಮಾ. ಅಂತರರಾಷ್ಟ್ರೀಯ ಖ್ಯಾತಿಯ ಸಿನಿಮಾಗಳನ್ನು ಅವರು ತಪ್ಪದೇ ವೀಕ್ಷಿಸುತ್ತಿದ್ದರು. ಆ ಎಲ್ಲ ಸಿನಿಮಾಗಳ ಸಿ.ಡಿ.ಗಳ ದೊಡ್ಡ ಸಂಗ್ರಹ ಅವರ ಬಳಿಯಿತ್ತು. ಆ ಸಿನಿಮಾಗಳನ್ನು ತನ್ಮಯತೆಯಿಂದ ವೀಕ್ಷಿಸುವ ಸಲುವಾಗಿಯೇ ಅವರ ಮೇಲ್ಮಹಡಿಯಲ್ಲಿ, ಆಗಿನ ಕಾಲದಲ್ಲಿಯೇ ಒಂದು ಹೋಮ್ ಥಿಯೇಟರ್ ಮಾಡಿಕೊಂಡಿದ್ದರು. 'ಟೈಟಾನಿಕ್' ಸಿನಿಮಾದ ಬಗೆಗೆ ಅವರು 'ಲಂಕೇಶ್ ಪತ್ರಿಕೆ'ಯಲ್ಲಿ ಬರೆದ ಲೇಖನವು ಸಿನಿಮಾ ಬಗೆಗಿನ ಅವರ ಆಳವಾದ ಗ್ರಹಿಕೆಗೆ ಹಿಡಿದ ಕನ್ನಡಿಯಾಗಿತ್ತು. 'ಪಥೇರ ಪಾಂಚಾಲಿ' ಸಿನಿಮಾ ನಿರ್ದೇಶಕ ಸತ್ಯಜಿತ್ ರೇ ಅವರನ್ನು ಕೆಲವು ವರ್ಷಗಳ ಕಾಲ ಅವರು ಮೈಮೇಲೆ ಆಹ್ವಾನಿಸಿಕೊಂಡಿದ್ದರು. ರೇ ಬರೆದ **'Speaking of Films'** ಗ್ರಂಥವನ್ನು ಅವರು ಪಾರಾಯಣ ಮಾಡುವವರ ಹಾಗೆ ಓದುತ್ತಿದ್ದರು. ಅವರ ಮನಸ್ಸಿನಲ್ಲಿ ಚಿತ್ರವೊಂದನ್ನು ನಿರ್ದೇಶಿಸುವ ಬಯಕೆ ಇತ್ತು ಎಂದು ಕಾಣುತ್ತದೆ. ಅದು ಯಾಕೋ ಈಡೇರಲಿಲ್ಲ. ತೀರ ಇತ್ತೀಚೆಗೆ ಅವರ ಹಿರಿಯ ಮಗ ಸಂಕೇತ್ ಜೊತೆಗೆ ಬಾದಾಮಿ ಸಮೀಪದ ಶಿವಯೋಗಮಂದಿರದ ಕುರಿತು ಒಂದು ಡಾಕ್ಯುಮೆಂಟರಿ ಮಾಡುತ್ತಿರುವುದಾಗಿಯೂ ಜಾತ್ರೆಯ ಸಂದರ್ಭದಲ್ಲಿ ಶೂಟಿಂಗ್ ಮಾಡಿಕೊಂಡು ಬಂದಿರುವುದಾಗಿಯೂ ಒಮ್ಮೆ ಮಾತಿನ ಮಧ್ಯದಲ್ಲಿ ಹೇಳಿದ್ದರು.

ಲಂಕೇಶ್ ಅವರ ಒಡನಾಟದಲ್ಲಿ ಯೋಗಪ್ಪನವರ್ ಅವರು ಉಳಿದುಕೊಳ್ಳುವಂತೆ ಮಾಡಿದ್ದು ಅವರ ವ್ಯಾಪಕವಾದ ಓದು. ಹೊಸದೇನನ್ನೂ ಓದದವರು, ಹೊಸ ರೀತಿಯಲ್ಲಿ ಆಲೋಚಿಸದವರು